ಶ್ರೀ ರಾಮಲಿಂಗಾರೆಡ್ಡಿ: ಅವೆಲ್ಲಾ ಸ್ವಲ್ಪ ನಿಧಾನವಾಗುತ್ತದೆ. ಅವರು ಎಷ್ಟು ಬೇಗ ಗ್ರಾಮಗಳಿಗೆ ರಸ್ತೆಗಳನ್ನು ಮಾಡಿಕೊಡುತ್ತಾರೋ, ಅಷ್ಟು ರಸ್ತೆಗಳಿಗೂ ಬಸ್‌ಗಳನ್ನು ಹಾಕುತ್ತೇವೆ.

ಅಧ್ಯಕ್ಷರು: ಆಯಿತು. ಮಾನ್ಯ ರೇವಣ್ಣನವರು ಮಾತನಾಡುವುದು.

ಹೊಸ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು

280 (3639); ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ)

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ: ಪ್ರಾರಂಭ ಮಾಡಲಾಗಿರುವ ಸ್ಥಳಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು)

ಆ) 2015–16 ನೇ ಸಾಲಿನಲ್ಲಿ ಪ್ರತಿ ವೈದ್ಯಕೀಯ ಕಾಲೇಜಿಗೆ ಭಾರತೀಯ ವೈದ್ಯಕೀಯ ಕೌನ್ಸಿಲ್ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಕಾಲೇಜುವಾರು ಸಂಪೂರ್ಣ ಮಾಹಿತಿ ನೀಡುವುದು);

ಇ) ಹೊಸ ವೈದ್ಯಕೀಯ ಕಾಲೇಜುಗಳಿಗೆ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಮೀಸಲಿಟ್ಟ ಹಣವೆಷ್ಟು ಹಾಗೂ ಬಿಡುಗಡೆಯಾದ ಹಣವೆಷ್ಟು; (ಕಾಲೇಜುವಾರು ಸಂಪೂರ್ಣ ಮಾಹಿತಿ ನೀಡುವುದು)?

ಡಾ॥ ಶರಣಪ್ರಕಾಶ .ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) 2015–16 ನೇ ಸಾಲಿನಿಂದ ಕೊಪ್ಪಳ, ಗದಗ ಮತ್ತು ಕಲ್ಬುರ್ಗಿ ಇಲ್ಲಿ ಹೊಸದಾಗಿ 03 ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ.

ಆ) 2015–16 ನೇ ಸಾಲಿನಲ್ಲಿ ಪ್ರತಿ ವೈದ್ಯಕೀಯ ಕಾಲೇಜಿಗೆ ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಅನುಮತಿ ನೀಡಲಾಗಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಅನುಬಂಧ–1 ರಲ್ಲಿ ನೀಡಿದೆ.

ಇ) ಕಲಬುರಗಿ, ಕೊಪ್ಪಳ ಮತ್ತು ಗದಗ ಇಲ್ಲಿ ಹೊಸದಾಗಿ ಪ್ರಾರಂಭಿಸಲಾಗುತ್ತಿರುವ 03 ವೈದ್ಯಕೀಯ ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಎಂಸಿಐ ನಿಯಮಾನುಸಾರ ಅಗತ್ಯವಿರುವ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಈ ವೈದ್ಯಕೀಯ ಕಾಲೇಜುಗಳಿಗೆ ಮೀಸಲಿಟ್ಟ ಹಾಗೂ ಬಿಡುಗಡೆಗೊಳಿಸಿದ ಅನುದಾನದ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

ಅನುಬಂಧ-I

S.No.	Course Name	State	Name and Address of Medical College / Medical Institution	University Name	Management of College	Year of Inception of College	Annual Intake (Seats)	Status of MCI Recognition	Date of LOP
1	M.B.B.S.	Karnataka	A J Institute of Medical Sciences & Research Centre, Mangalore	Rajiv Gandhi University of Health Sciences	Trust	2002	150	Recognized for 100 seats. Permitted for renewal of permission for increase of seats from 100 to 150 for the year 2015-16.	
2	M.B.B.S.	Karnataka	Adichunchanagiri Institute of Medical Sciences Bellur	Rajiv Gandhi University of Health Sciences	Trust	1985	150	Recognized for 100 seats.Permitted for renewal of permission for increase of seats from 100 to 150 u/s 10(A) for 2015-16.	
3	M.B.B.S.	Karnataka	Al-Ameen Medical College,Bijapur	Rajiv Gandhi University of Health Sciences	Trust	1984	100	Recognized for 100 seats. Not permitted for renewal of permission for increase of seats from 100 to 150 u/s 10(A) for 2015-16.	
4	M.B.B.S.	Karnataka	Bangalore Medical College and Research Institute, Bangalore	Rajiv Gandhi University of Health Sciences	Govt.	1955	250	Recognized for 150 seats. Permitted for renewal of permission for increase of seats from 150 to 250 u/s 10(A) for 2015-16.	

5	M.B.B.S.	Karnataka	Basaveswara Medical College and Hospital, Chitradurga	Rajiv Gandhi University of Health Sciences	Trust	1999	100	Recognized (Issued show cause notice for withdrawal of recognition u/s 19).	
6	M.B.B.S.	Karnataka	Belgaum Institute of Medical Sciences, Belgaum	Rajiv Gandhi University of Health Sciences	Govt.	2006	100	Recognized when degree granted on or after December 2010.	
7	M.B.B.S.	Karnataka	BGS Global Institute of Medical Sciences, Bangalore	Rajiv Gandhi University of Health Sciences	Trust	2013	0	Not permitted for renewal of permission u/s 10(A) for 2015-16.	02/07/2013
8	M.B.B.S.	Karnataka	Bidar Institute of Medical Sciences,Bidar	Rajiv Gandhi University of Health Sciences	Govt.	2007	100	Recognized when degree granted on or after January,2012	
9	M.B.B.S.	Karnataka	Dr BR Ambedkar Medical College, Bangalore	Rajiv Gandhi University of Health Sciences	Trust	1980	100	Recognized	
10	M.B.B.S.	Karnataka	Employees State Insurance Corporation Medical College, Bangalore	Rajiv Gandhi University of Health Sciences	Govt.	2012	0	Not permitted for renewal of permission u/s 10(A) for 2015-16.	27/06/2012
				Rajiv					

7/22/2015 Colleges & Courses Search

11	M.B.B.S.	Karnataka	ESIC Medical College, Gulbarga	Rajiv Gandhi University of Health Sciences	Govt.	2013	0	Not permitted for renewal of permission u/s 10(A) for 2015-16.	15/07/2015
12	M.B.B.S.	Karnataka	Father Muller Institute of Medical Education and Research, Mangalore	Rajiv Gandhi University of Health Sciences	Trust	1999	100	Recognized for 100 seats. Not permitted for renewal of permission for increase of seats from 100 to 150 u/s 10(A) for 2015-16.	
13	M.B.B.S.	Karnataka	Gadag Institute of Medical Sciences, Mallasamudra, Mulgund Road, Gadag	Rajiv Gandhi University of Health Sciences	Govt	2015	150	Permitted u/s 10(A) for 2015-16.	03/06/2015
14	M.B.B.S.	Karnataka	Government Medical College, Mysore	Rajiv Gandhi University of Health Sciences	Govt.	1924	150	Recognized for 100 seats. Permitted for renewal of permisson for increase of seats from 100 to 150 for 2015-16.	
15	M.B.B.S.	Karnataka	Gulbarga Institute of Medical Sciences, Gulbarga	Rajiv Gandhi University of Health Sciences	Govt.	2015	150	Permitted u/s 10(A)for 2015-16.	08/06/2015
16	M.B.B.S.	Karnataka	Hassan Institute of Medical Sciences, Hassan	Rajiv Gandhi University of Health Sciences	Govt	2006	100	Recognized when degree granted on or after January 2011	
17	M.B.B.S.	Karnataka	Jawaharlal Nehru Medical College, Belgaum	KLE University (Deemed Univ.), Belgaum	Trust	1963	200	Recognized for 150. Permitted for renewal of permisson for increase of seats from 150 to 200 u/s 10(A) for 2015-16.	
18	M.B.B.S.	Karnataka	JJM Medical College, Davangere	Rajiv Gandhi University of Health Sciences	Trust	1965	245	Recognized	

19	M.B.B.S.	Karnataka	JSS Medical College, Mysore	JSS University, Mysore	Trust	1984	200	Recognized for 150 seats. Prev under RGUHS. Permitted for renewal of permission for increase of seats from 150 to 200 u/s for 2015-16.	
20	M.B.B.S.	Karnataka	K S Hegde Medical Academy, Mangalore	Nitte University (Deemed Univ.), Mangalore	Trust	1999	150	Recognized for 100 seats. Permitted for renewal of Permission for increase of seats from 100 to 150 for 2015-16	
21	M.B.B.S.	Karnataka	K V G Medical College, Sullia	Rajiv Gandhi University of Health Sciences	Trust	1999	100	Recognized	
22	M.B.B.S.	Karnataka	Karnataka Institute of Medical Sciences, Hubli	Rajiv Gandhi University of Health Sciences	Govt.	1957	150	Recognized for 100. Permitted for renewal of permission for increase of seats from 100-150 u/s 10(A) for 2015-16.	
23	M.B.B.S.	Karnataka	Kasturba Medical College, Mangalore	Manipal Academy of Higher Education	Trust	1955	250	Recognized	
24	M.B.B.S.	Karnataka	Kasturba Medical College, Manipal	Manipal Academy of Higher Education	Trust	1953	250	Recognized	
25	M.B.B.S.	Karnataka	Kempegowda Institute of Medical Sciences, Bangalore	Rajiv Gandhi University of Health Sciences	Trust	1980	150	Recognized for 120 seats. Permitted for renewal of permission for increase of seats from 120 to 150 for 2015-16.	
26	M.B.B.S.	Karnataka	Khaja Banda Nawaz Institute of Medical Sciences, Gulbarga	Rajiv Gandhi University of Health Sciences	Trust	2000	100	Recognized when degree granted on or after 04.04.2006	
27	M.B.B.S.	Karnataka	Koppal Institute of Medical Sciences, Koppal	Rajiv Gandhi University of Health Sciences	Govt.	2015	150	Permitted u/s 10(A) for 2015-16.	08/06/2015
28	M.B.B.S.	Karnataka	M S Ramaiah Medical College, Bangalore	Rajiv Gandhi University of Health Sciences	Trust	1979	150	Recognized (show cause notice for withdrawal of recognition revoked)	
29	M.B.B.S.	Karnataka	Mahadevappa Rampure Medical College, Gulbarga	Rajiv Gandhi University of Health Sciences	Trust	1963	150	Recognized	

7/22/2015 Colleges & Courses Search

30	M.B.B.S.	Karnataka	Mandya Institute of Medical Sciences, Mandya	Rajiv Gandhi University of Health Sciences	Govt.	2006	100	Recognized when degree granted on or after January,2011	
31	M.B.B.S.	Karnataka	MVJ Medical College and Research Hospital, Bangalore	Rajiv Gandhi University of Health Sciences	Trust	1997	150	Recognized for 100 seats when degree granted on or after 24.05.2006 and onwards. Permitted for renewal of permission for increase of seats from 100 to 150 u/s 10(A) for 2015-16.	
32	M.B.B.S.	Karnataka	Navodaya Medical College, Raichur	Rajiv Gandhi University of Health Sciences	Trust	2000	100	Recognized for 100 seats when degree granted on after Mar2007. Not permitted for renewal of permission for increase of seats from 100 to 150 u/s 10(A) for 2015-16.	
33	M.B.B.S.	Karnataka	Raichur Institute of Medical Sciences,Raichur	Rajiv Gandhi University of Health Sciences	Govt.	2007	100	Recognized when degree granted on or after Jan 2012.(Issued Show cause notice for recommendation of withdrawal of recognition)	
34	M.B.B.S.	Karnataka	Rajarajeswari Medical College & Hospital, Bangalore	Rajiv Gandhi University of Health Sciences	Trust	2005	100	Recognized for 100. Not Permitted for renewal of permission for increase of seats from 100 to 150 for 2015-16.	
35	M.B.B.S.	Karnataka	S S Institute of Medical Sciences& Research Centre, Davangere	Rajiv Gandhi University of Health Sciences	Trust	2006	150	Recognized when degree granted on or after January2011	
36	M.B.B.S.	Karnataka	S. Nijalingappa Medical College & HSK Hospital & Research Centre, Bagalkot	Rajiv Gandhi University of Health Sciences	Trust	2002	150	Recognized for 100 seats when degree granted on or after Feb2007. Permitted for renewal of permission for increase of seats from 100 to 150 for the year 2015-16.	
37	M.B.B.S.	Karnataka	Sapthagiri Institute of Medical Sciences & Research Centre, Bangalore	Rajiv Gandhi University of Health Sciences	Trust	2011	0	Not permitted for renewal of permission u/s 10(A) for 2015-16.	21/06/201
38	M.B.B.S.	Karnataka	SDM Medical College, Dharwad	Rajiv Gandhi University of Health Sciences	Trust	2003	100	Recognized	

39	M.B.B.S.	Karnataka	Shimoga Institute of Medical Sciences,Shimoga	Rajiv Gandhi University of Health Sciences	Govt.	2007	100	Recognized when degree granted on or after January,2012	
40	M.B.B.S.	Karnataka	Shri B M Patil Medical College, Hospital & Research Centre, Bijapur	Rajiv Gandhi University of Health Sciences	Trust	1986	150	Recognized	
41	M.B.B.S.	Karnataka	Shridevi Institute of Medical Sciences & Research Hospital, Tumkur	Rajiv Gandhi University of Health Sciences	Trust	2013	0	Not permitted for renewal of permission u/s 10(A) for 2015-16.	13/07/201
42	M.B.B.S.	Karnataka	Sri Devaraj URS Medical College, Kolar	Sri Devaraj Urs University	Trust	1986	150	Recognized	
43	M.B.B.S.	Karnataka	Sri Siddhartha Medical College, Tumkur	Sri Siddhartha University, Tumkur	Trust	1988	150	Recognized for 130, permitted for renewal of permition for increase of seats from 130 to 150 for 2014-15 on the basis of undertaking filed by the college authority before Hon ble Supreme Court (WP(C) No. 469 of 2014)	
44	M.B.B.S.	Karnataka	Srinivas Institute of Medical Research Centre, Srinivasnagar	Rajiv Gandhi University of Health Sciences	Trust	2011	0	Not permitted for renewal of permission u/s 10(A) for 2015-16.	30/06/2011
45	M.B.B.S.	Karnataka	St. Johns Medical College, Bangalore	Rajiv Gandhi University of Health Sciences	Trust	1963	60	Recognized	
46	M.B.B.S.	Karnataka	Subbaiah Institute of Medical Sciences, Shimoga, Karnataka	Rajiv Gandhi University of Health Sciences	Trust	2012	150	Permitted for renewal of permission u/s 10(A) for 2015-16.	29/06/201
47	M.B.B.S.	Karnataka	The Oxford Medical College, Hospital & Research Centre, Bangalore	Rajiv Gandhi University of Health Sciences	Society	2014	0	Not permitted for renewal of permission u/s 10(A) for 2015-16.	18/07/201
			Vijaynagar Institute	Rajiv Gandhi				Recognized for 100 seats. Permitted for renewal	

7/22/2015 Colleges & Courses Search

48	M.B.B.S.	Karnataka	of Medical Sciences, Bellary	University of Health Sciences	Govt.	1961	150	of permission for increase of seats from 100 to 150 u/s 10(A) for 2015-16.
49	M.B.B.S.	Karnataka	Yenepoya Institute Of Medical Sciences & Research Centre, Bangalore	Rajiv Gandhi University of Health Sciences	Trust	2002	250	Recognized for 150 seats. Permitted for renewal of permission for increase of seats from 150 to 250 u/s 10(A) for 2015-16.
50	M.B.B.S.	Karnataka	Yenepoya Medical College, Mangalore	Yenepoya (Deemed) University	Trust	1999	150	Recognized for 100 seats. Permitted for renewal of permission for increase of seats from 100 to 150 for 2015-16.

Print

ಅನುಬಂಧ-2

ಕೊಪ್ಪಳ, ಗದಗ ಮತ್ತು ಕಲ್ಬುರ್ಗಿ ವೈದ್ಯಕೀಯ ಕಾಲೇಜುಗಳಿಗೆ ಕಟ್ಟಡ ನಿರ್ಮಾಣ ಹಾಗೂ ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಸಲುವಾಗಿ ಒದಗಿಸಲಾದ ಅನುದಾನದ ವಿವರ:

(ರೂ. ಕೋಟಿಗಳಲ್ಲಿ)

ಕ್ರ.ಸಂ.	ವೈದ್ಯಕೀಯ ಕಾಲೇಜುಗಳ ಹೆಸರು	ಒದಗಿಸಲಾದ ಅನುದಾನ	ಬಿಡುಗಡೆಯಾದ ಅನುದಾನ
1.	ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ	06 ಹೊಸ ವೈದ್ಯಕೀಯ ಕಾಲೇಜುಗಳಿಗೆ ಇದುವರೆಗೂ ಒಟ್ಟು ರೂ.788.33 ಕೋಟಿಗಳನ್ನು ಒದಗಿಸಲಾಗಿದೆ.	139.80
2.	ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ		127.45
3.	ಕಲ್ಬುರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲ್ಬುರ್ಗಿ		144.80

ಪ್ರಶ್ನೆ ಸಂಖ್ಯೆ: 280 (3639)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಭಾರತೀಯ ವೈದ್ಯಕೀಯ ಕೌನ್ಸಿಲ್ norms ಪ್ರಕಾರ, ಉದಾಹರಣೆಗೆ ಹಾಸನ ಮೆಡಿಕಲ್ ಕಾಲೇಜ್, building ಕಟ್ಟಿ ನಾಲ್ಕು ವರ್ಷಗಳು ಆಯಿತು. ಇವತ್ತಿನವರೆಗೂ ಆ ಆಸ್ಪತ್ರೆಗೆ ಮೂಲಭೂತ ಸೌಕರ್ಯ ಏನೂ ಇಲ್ಲ. ಅಲ್ಲಿ ಎರಡೂವರೆ ಕೋಟಿ ರೂ.ಗಳ ಒಂದು X-ray machine ತರಿಸಿದ್ದು, ಅದು ತುಕ್ಕು ಹಿಡಿಯುತ್ತಿದೆ. ಇವತ್ತಿನವರೆಗೂ ಅದನ್ನು ಯಾರೂ ಉಪಯೋಗ ಮಾಡುವುದಕ್ಕೆ ಆಗಿಲ್ಲ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಂದ private hospitalsಗೆ ರೋಗಿಗಳನ್ನು ಕಳುಹಿಸಿಕೊಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಪ್ರಶ್ನೆ ಕೇಳಿರುವುದು ಏನು?

ಶ್ರೀ ಹೆಚ್.ಡಿ. ರೇವಣ್ಣ: ಸಾರ್, ಮೂಲಭೂತ ಸೌಕರ್ಯದ ಬಗ್ಗೆ ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು: ಅದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಹಾಸನ ಮೆಡಿಕಲ್ ಕಾಲೇಜಿಗೆ ಮೂಲಭೂತ ಸೌಕರ್ಯ ಒದಗಿಸಿಲ್ಲವೆಂದು ಕೇಳುತ್ತಿದ್ದೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಹೊಸದಾಗಿ ಮೆಡಿಕಲ್ ಕಾಲೇಜಿನ ಬಗ್ಗೆ ಇದೆ, ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಹಾಸನ ಮೆಡಿಕಲ್ ಕಾಲೇಜಿನ ಬಗ್ಗೆಯೂ ನಾನು ಉತ್ತರ ಕೊಡುತ್ತೇನೆ. ಹಾಸನ ಮೆಡಿಕಲ್ ಕಾಲೇಜಿನಲ್ಲಿ ಈಗಾಗಲೇ ಹಿಂದೆ ಕಟ್ಟಡ ಕಟ್ಟಿ, ಕಟ್ಟಡಕ್ಕೆ ಇನ್ನೂ shift ಆಗದೇ ಇರುವುದು ನಿಜ. ಈಗಾಗಲೇ ಇದಕ್ಕೆ ಸಂಬಂಧಿಸಿಂತೆ tender process complete ಆಗಿದೆ. Gas pipeline ಆಗಿರಲಿಲ್ಲ. ಕೆಲವು ಉಪಕರಣಗಳು ಬಂದಿರಲಿಲ್ಲ. ಈಗ ಎಲ್ಲಾ ದುಡ್ಡು ಕೊಟ್ಟಿದ್ದೇವೆ. ಇನ್ನು ಒಂದು ತಿಂಗಳಿನೊಳಗಾಗಿ ಅದನ್ನು ಪ್ರಾರಂಭ

ಮಾಡುವುದಕ್ಕೆ ಎಲ್ಲಾ ಕ್ರಮ ವಹಿಸುತ್ತಿದ್ದೇವೆ. Almost complete ಆಗಿದೆ. ಇನ್ನು ಒಂದು ತಿಂಗಳಿನೊಳಗಾಗಿ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಎರಡೂವರೆ ಕೋಟಿ ರೂ.ಗಳ X-ray machine ಉಪಯೋಗ ಮಾಡದೇ ಹಾಳು ಬಿದ್ದಿದೆ.

ಅಧ್ಯಕ್ಷರು: ಅದನ್ನು ಆನಂತರ ಕೇಳಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅದನ್ನು ನೋಡಿ ಹೊಸ ಆಸ್ಪತ್ರೆಯಲ್ಲಿ ಅಳವಡಿಸುತ್ತೇವೆ.

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ಒಂದು ಪ್ರಶ್ನೆ. ಎಷ್ಟು ಕಾಲೇಜುಗಳಿಗೆ MCI intake ಗೆ ಅನುಮತಿ ಕೊಟ್ಟಿಲ್ಲ?

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಅದಕ್ಕೆ ಉತ್ತರ ಕೊಡಬೇಕೇ?

ಅಧ್ಯಕ್ಷರು: ಹೇಳಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಕಳೆದ ಬಾರಿ 6 ಮೆಡಿಕಲ್ ಕಾಲೇಜುಗಳಿಗೆ ನಾವು apply ಮಾಡಿದ್ದೆವು, ಅದರಲ್ಲಿ ಮೂರು ಮೆಡಿಕಲ್ ಕಾಲೇಜಗಳಿಗೆ MCI ಅನುಮತಿ ಕೊಟ್ಟಿದೆ. Admissionಗೂ ಕೂಡ ನಾವು seat matrix ನಲ್ಲಿ ಹಾಕಿದ್ದೇವೆ. Admission ಕೂಡ ಆಗುತ್ತಿದೆ. ಇನ್ನೂ ಮೂರು ಮೆಡಿಕಲ್ ಕಾಲೇಜು, ಮಡಿಕೇರಿ, ಕಾರವಾರ, ಚಾಮರಾಜನಗರಕ್ಕೆ ಈ ವರ್ಷ ಅನುಮತಿ ಸಿಕ್ಕಿಲ್ಲ. ಮುಂದಿನ ವರ್ಷಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ.ಟಿ. ರವಿ: ಖಾಸಗಿ ಕಾಲೇಜಿಗೆ ...

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಖಾಸಗಿಯದ್ದು ಬೇರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: Government Seat 300 ಕಡಿಮೆಯಾಗಿದೆ.

(ಗೊಂದಲ)

ಅಧ್ಯಕ್ಷರು: ಆ ವಿಷಯ ಇದರೊಳಗೆ ಬರುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಬರುತ್ತದೆ ಸಾರ್. ಎರಡನೇ ಪ್ರಶ್ನೆಯಲ್ಲಿ ಬರುತ್ತದೆ.

ಅಧ್ಯಕ್ಷರು: ಏನೆಂದು ಇದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮ್ಮ 50 ಕಾಲೇಜುಗಳಿಂದ ವಿದ್ಯಾರ್ಥಿಗಳ ಸಂಖ್ಯೆ ಇದೆಯಲ್ಲಾ, 300 seat ಕಡಿಮೆಯಾಯಿತು.

(ಗೊಂದಲ)

ಶ್ರೀ ಸಿ.ಟಿ. ರವಿ: ನೀವು ಕೊಟ್ಟಿರುವುದರೊಳಗೆ ಈಗ not-permitted ಎಂದು ಕೊಟ್ಟಿದ್ದೀರಿ. ಎಷ್ಟು ಕಾಲೇಜುಗಳಿಗೆ not-permitted ಕೊಟ್ಟಿದ್ದೀರಿ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸುಮಾರು ಆರು ಕಾಲೇಜುಗಳಿಗೆ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಯಾವ್ಯಾವು?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾಹಿತಿ ಬೇಕಿದ್ದರೆ ಅದನ್ನು ಪ್ರತ್ಯೇಕವಾಗಿ ಕೊಡುತ್ತೇನೆ. ಪ್ರಶ್ನೆ ಕೇಳಿರುವುದರಲ್ಲಿ ಇರಲಿಲ್ಲ. 5–6 ಖಾಸಗಿ ಕಾಲೇಜುಗಳಿಗೆ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಆ ಪ್ರಶ್ನೆ ಇಲ್ಲಿ ಬರುವುದಿಲ್ಲ ಬಿಡಿ. ಸುಮ್ಮನೆ ಏಕೆ ಚರ್ಚೆ ಮಾಡುತ್ತೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ವೈದ್ಯಕೀಯ ವಿದ್ಯಾರ್ಥಿಗಳಿಗೆ over all 50 ಸರ್ಕಾರಿ ಕಾಲೇಜುಗಳಲ್ಲಿ 300 seat ಕಡಿಮೆ ಆಯಿತು. ಯಾವ ಕಾರಣದಿಂದ ಆಯಿತು? ಅದನ್ನು ಹೇಗೆ ಭರ್ತಿ ಮಾಡಿಕೊಳ್ಳುತ್ತೀರಿ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಕೆಲವೊಂದು ಖಾಸಗಿ ಕಾಲೇಜುಗಳಿಗೆ MCI permission ಕೊಟ್ಟಿಲ್ಲ. ಆದ್ದರಿಂದ ಅದರಲ್ಲಿ ನಮ್ಮ Government share ಏನು ಬರುತ್ತಿತ್ತು, ಅದು naturally ಕಡಿಮೆಯಾಗಿದೆ, ಆದರೆ ನಮ್ಮ Government seat ನಲ್ಲಿ ಯಾವುದೂ ಕಡಿಮೆ ಆಗಿಲ್ಲ, except one Dental College, Bellary. ಅದು ಒಂದಕ್ಕೆ ಅನುಮತಿ ಸಿಕ್ಕಿಲ್ಲ. ಯಾವುದೂ ಮೆಡಿಕಲ್ ಕಾಲೇಜನಲ್ಲಿ ಸೀಟು ಕಡಿಮೆ ಆಗಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮೂಲಭೂತ ಸೌಕರ್ಯಗಳು ಇಲ್ಲದೇ P.G seat ಗಳು ಆಗಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಇದರೊಳಗೆ ಆ ಪ್ರಶ್ನೆ ಬರುವುದಿಲ್ಲ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅದನ್ನು ಆನಂತರ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಹ್ಯಾರೀಸ್‌ರವರೆ, ತಮ್ಮ ಪ್ರಶ್ನೆ ಸಂಖ್ಯೆ 3542 ಕ್ಕೆ ಉತ್ತರ ನೀಡಲು ಮಾನ್ಯ ಸಚಿವರು 15 ದಿವಸ ಸಮಯ ಕೇಳಿದ್ದಾರೆ.

ಶ್ರೀ ಎನ್.ಎ. ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿನಂತಿ. ನಾನು ಪ್ರಶ್ನೆ ಕೇಳಿರುವುದರಲ್ಲಿ ದೊಡ್ಡ research ಮಾಡುವಂಥದ್ದು ಏನೂ ಇರಲಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಕಾಲಾವಕಾಶ ಕೇಳಿದ್ದಾರೆ. ಮಾನ್ಯ ಶ್ರೀ ಎಸ್.ಎನ್. ನಾರಾಯಣಸ್ವಾಮಿಯವರು ಮಾತನಾಡುವುದು.

ಪ್ರಶ್ನೆ ಸಂಖ್ಯೆ: 282 (3694)

ಶ್ರೀ ಎಸ್.ಎನ್. ನಾರಾಯಣಸ್ವಾಮಿ (ಬಂಗಾರಪೇಟೆ): ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 3694 ಅನ್ನು ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರನ್ನು ಕೇಳಲು ಬಯಸುತ್ತೇನೆ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವೃದ್ಧಾಶ್ರಮದ ಬಗ್ಗೆ ಕೇಳಿದ್ದಾರೆ. ಈ ವಿಷಯ ನನಗೆ ಬರುವುದಿಲ್ಲ. ಇದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಗೆ ಬರುತ್ತದೆ.

ಅಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿಯವರೆ, ಸದರಿ ಪ್ರಶ್ನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹಾಕುತ್ತೇನೆ ಬಿಡಿ.